## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 607 |
| ಸದಸ್ಯರ ಹೆಸರು: | ಡಾ: ತೇಜಸ್ವಿನಿ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು: | ಮುಖ್ಯಮಂತ್ರಿಯವರು |
| ಉತ್ತರಿಸಬೇಕಾದ ದಿನಾಂಕ: | 13-12-2018 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಮದ್ಯ ಮಾರಾಟಕ್ಕೆ ಸನ್ನದು ಪಡೆದಿರುವವರ ಸಂಖ್ಯೆ ಎಷ್ಟು; ಅನಧಿಕೃತ ಅಂಗಡಿಗಳೆಷ್ಟು;<br>(ಮಾಹಿತಿ ನೀಡುವುದು) | 2018-19ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 10,566 ವಿವಿಧ ರೀತಿಯ ಸನ್ನದುಗಳು ಕಾರ್ಯ ನಿರ್ವಹಿಸುತ್ತಿದ್ದು, ಅನಧಿಕೃತ ಅಂಗಡಿಗಳು ಇರುವುದಿಲ್ಲ.<br><br>ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ | ಜನವಸತಿ ಹಾಗೂ ಶಾಲೆ-ಆಸ್ಪತ್ರೆಯಂತಹ ಸಾರ್ವಜನಿಕ ಸ್ಥಳಗಳಲ್ಲಿ ನಿಯಮ ಉಲ್ಲಂಘಿಸಿ, ತೆರೆದಿರುವ ಮದ್ಯ ಮಾರಾಟ ಅಂಗಡಿ ಹಾಗೂ 'ಬಾರ್' (ಮದ್ಯಸೇವನೆ) ಗಳೆಷ್ಟು; | ಜನವಸತಿ ಹಾಗೂ ಶಾಲೆ-ಆಸ್ಪತ್ರೆಯಂತಹ ಸಾರ್ವಜನಿಕ ಸ್ಥಳಗಳಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು), ನಿಯಮಗಳು, 1967 ರ ನಿಯಮ 5 ಅನ್ನು ಉಲ್ಲಂಘಿಸಿ ಯಾವುದೇ ಮದ್ಯ ಮಾರಾಟ ಅಂಗಡಿ ಹಾಗೂ ಬಾರ್ ತೆರೆದಿರುವುದಿಲ್ಲ. |
| ಇ | ಮದ್ಯ ಸೇವನೆಯಿಂದ ಅನಾರೋಗ್ಯ ಹಾಗೂ ಮನೋರೋಗ ಸಮುಂಸಕತ್ವ ಹಾಗೂ ಮದ್ಯ ವ್ಯಸನಿಗಳೆಷ್ಟು; | ಈ ವಿಷಯದ ಬಗ್ಗೆ ನಿರ್ದಿಷ್ಟ ಮಾಹಿತಿಯು ಲಭ್ಯವಿಲ್ಲದಿದ್ದರೂ, ಮದ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವುದು ಆರೋಗ್ಯಕ್ಕೆ ಹಾನಿಕರ. ಸರ್ಕಾರವು ಜವಾಬ್ದಾರಿಯುತ ಮದ್ಯಸೇವನೆಯ ಪರವಾಗಿದೆ. ಈ ಅಂಶದ ಬಗ್ಗೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯು ಪಾನಿಕರಲ್ಲಿ ಅರಿವು ಮೂಡಿಸುತ್ತಿದೆ. |
| ಈ | ಮದ್ಯಪಾನದ ದುಷ್ಪರಿಣಾಮಗಳ ವಿರುದ್ಧ ಜಾಗೃತಿ ಮೂಡಿಸಲು ಕೈಗೊಂಡಿರುವ ಕ್ರಮಗಳೇನು ಹಾಗೂ ವ್ಯಯಿಸುತ್ತಿರುವ ಹಣವೆಷ್ಟು; ಆರೋಗ್ಯ ಇಲಾಖೆಯ ಜೊತೆ ಈ ಬಗ್ಗೆ ಸಮನ್ವಯ ಇದೆಯೇ; | ಮದ್ಯಪಾನದ ದುಷ್ಪರಿಣಾಮಗಳ ಕುರಿತು ಕ್ಷೇತ್ರ ಸಿಬ್ಬಂದಿಯವರಿಂದ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಶೈಕ್ಷಣಿಕ ಸಂಸ್ಥೆಗಳು ಹಾಗೂ ವೃತ್ತಿಪರ ಕಾಲೇಜುಗಳಲ್ಲಿ ಡ್ರಗ್ಸ್ ಹಾಗೂ ಮದ್ಯಪಾನದಿಂದ ಆಗುವ ಅನಾಹುತಗಳ ಬಗ್ಗೆ ಕಮ್ಮಟಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಮ ಸಭೆಗಳಲ್ಲಿ ಮದ್ಯ ಸಂಬಂಧಿ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತಿದೆ. ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಕಾನೂನು ಅರಿವು ಕಾರ್ಯಕ್ರಮಗಳಲ್ಲಿ ಮದ್ಯ, ಡ್ರಗ್ಸ್‌ನಿಂದಾಗುವ ದುಷ್ಪರಿಣಾಮದೊಂದಿಗೆ ಕಾನೂನಿನ ತಿಳುವಳಿಕೆಯನ್ನು ನೀಡಲಾಗುತ್ತಿದೆ. ಸದರಿ ಪ್ರಕ್ರಿಯೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಜೊತೆ ಸಮನ್ವಯ ಸಾಧಿಸಲಾಗುತ್ತಿದೆ.<br><br>ಅಲ್ಲದೇ, ಮದ್ಯದ ಬಾಟಲುಗಳಲ್ಲಿನ ಲೇಬಲ್‌ಗಳ ಮೇಲೆ ಕಡ್ಡಾಯವಾಗಿ "ಮದ್ಯಪಾನ ಸೇವನೆಯಿಂದ ಆರೋಗ್ಯಕ್ಕೆ ಹಾನಿಕರ" ಎಂಬ ಶೀರ್ಷಿಕೆಯನ್ನು ಮುದ್ರಿಸಲಾಗುತ್ತಿದೆ. |

_2

| | | |
|---|---|---|
| | | ಜವಾಬ್ದಾರಿಯುತ ಮದ್ಯ ಸೇವನೆ ಹಾಗೂ ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡದಿರುವ ವಿಷಯವಾಗಿ ಸನ್ನದುದಾರರು ಹಾಗೂ ಅವರ ನೌಕರರಿಗೆ ಇಲಾಖೆಯಿಂದ ಮನವರಿಕೆ ಮಾಡಿ, ಈ ಕುರಿತು ಮದ್ಯ ಪಾನೀಕರಿಗೆ ವಿಷಯವನ್ನು ಮನದಟ್ಟು ಮಾಡಲು ತಿಳಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ಪ್ರತ್ಯೇಕ ಬಜೆಟ್ ಇರುವುದಿಲ್ಲ. ಅಲ್ಲದೇ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯಿಂದ ಮದ್ಯದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |
| ಉ | ಸರ್ಕಾರಕ್ಕೆ ಮದ್ಯ ಮಾರಾಟದ ಆದಾಯ ಅನಿವಾರ್ಯವೆ? (ವಿವರ ನೀಡುವುದು) | ಸುರಕ್ಷಿತವಲ್ಲದ ಮದ್ಯದ ಬಳಕೆಯನ್ನು ನಿಯಂತ್ರಿಸುವುದರ ಮೂಲಕ ಅಬಕಾರಿ ಆದಾಯದಲ್ಲಿ ಉತ್ತಮತೆಯನ್ನು ಸಾಧಿಸುವುದು ಮತ್ತು ಮದ್ಯ ಬಳಕೆದಾರರಿಗೆ ಆರೋಗ್ಯಕರ ವಾತಾವರಣದಲ್ಲಿ ಮದ್ಯದ ಸರಬರಾಜನ್ನು ಖಾತರಿಪಡಿಸಿಕೊಳ್ಳುವುದು ಇಲಾಖೆಯ ದೂರದೃಷ್ಟಿ ಆಗಿರುತ್ತದೆ. ಅಲ್ಲದೇ, ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟವನ್ನು ಕ್ರಮಬದ್ಧಗೊಳಿಸಿ, ರಾಜ್ಯದ ಬೊಕ್ಕಸಕ್ಕೆ ಆದಷ್ಟು ರಾಜಸ್ವವನ್ನು ಸಂಗ್ರಹಿಸಿ ಅದನ್ನು ಸರ್ಕಾರದ ವಿವಿಧ ಯೋಜನೆಗಳಿಗೆ ವಿನಿಯೋಗಿಸಲಾಗುತ್ತಿದೆ. |

ಆಇ 63 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

## ಅನುಬಂಧ

## 2018-19ನೇ ಸಾಲಿನ ಅಬಕಾರಿ ವರ್ಷದಲ್ಲಿ ಅಕ್ಟೋಬರ್ ಅಂತ್ಯಕ್ಕೆ ಎಲ್ಲಾ ಬಗೆಯ ಸನ್ನದುಗಳ ವಿವರ

| ಕ್ರ ಸಂ | ಸನ್ನದುಗಳ ವಿಧಗಳು | ಸನ್ನದುಗಳ ಸಂಖ್ಯೆ |
|---|---|---|
| 1 | ಸಿಎಲ್-2 (ಚಿಲ್ಲರೆ ಮದ್ಯ ಮಾರಾಟದ ಅಂಗಡಿಗಳು) | 3930 |
| 2 | ಸಿಎಲ್-4 (ಕ್ಲಬ್‌ಗಳು) | 235 |
| 3 | ಸಿಎಲ್-6ಎ (ಸ್ಟಾರ್ ಹೋಟೆಲ್‌ಗಳು) | 75 |
| 4 | ಸಿಎಲ್-7 (ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್) | 1112 |
| 5 | ಸಿಎಲ್-14 (ಟೂರಿಸ್ಟ್ ಹೋಟೆಲ್ - ಮದ್ಯ& ಬೀರ್) | 14 |
| 6 | ಸಿಎಲ್-15 (ಟೂರಿಸ್ಟ್ ಹೋಟೆಲ್ - ಬೀರ್ ಮಾತ್ರ) | 8 |
| 7 | ಸಿಎಲ್-8 (ಮಿಲಿಟರಿ ಕ್ಯಾಂಟೀನ್ ಮಳಿಗೆ) | 59 |
| 8 | ಸಿಎಲ್-8ಎ (ಬಾಂಡೆಡ್ ವೇರ್ ಹೌಸ್) | 3 |
| 9 | ಸಿಎಲ್-8ಬಿ (ಬಿ.ಎಸ್.ಎಫ್& ಪ್ಯಾರಾ ಮಿಲಿಟರಿ ಫೋರ್ಸ್) | 4 |
| 10 | ಸಿಎಲ್-9 (ಬಾರ್ ಮತ್ತು ರೆಸ್ಟೋರೆಂಟ್) | 3583 |
| 11 | ಸಿಎಲ್-11 (ಡಿಸ್ಟ್ರಿಬ್ಯೂಟರ್ಸ್ ಪರವಾನಗಿ) | 1 |
| 12 | ಸಿಎಲ್-11ಸಿ (ಎಂ.ಎಸ್.ಐ.ಎಲ್. ಶಾಪ್) | 716 |
| 13 | ಸಿಎಲ್-16 (ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪರವಾನಿಗಿ -ಡ್ಯೂಟಿ ಫ್ರಿ ಮದ್ಯ ಮಾರಾಟ) | 4 |
| 14 | ಸಿಎಲ್-17/18 (ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪರವಾನಿಗೆ ರಿಫ್ರೆಷ್‌ಮೆಂಟ್ ಬಾರ್) | 9 |
| 15 | ಸ್ವತಂತ್ರ ಆರ್‌ವಿಬಿ | 65 |
| 16 | ಬಾರ್‌ಗೆ ಹೊಂದಿಕೊಂಡಂತೆ ಆರ್‌ವಿಬಿ | 410 |
| 17 | ವೈನ್ ಟ್ಯಾವರ್ನ್ | 221 |
| 18 | ವೈನ್ ಬೋಟಿಕ್ | 69 |
| 19 | ಮೈಕ್ರೋ ಬ್ರೀವರಿಗಳು | 48 |
| **ಒಟ್ಟು** | | **10,566** |

ಆಇ 63 ಇಎಲ್‌ಕ್ಯೂ 2018